# ಬೆಂಗಳೂರಿನ ಬೆಡಗಿ ತಬೂಬಿಯಾ

■ ಚಿತ್ರ–ಬರಹ:
**ಅಂಜಲಿ ಕೆ.ಬಿ.**



ತಬೂಬಿಯಾ ಎಂದರೆ ಎಲ್ಲರನ್ನೂ ತನ್ನತ್ತ ಆಕರ್ಷಿಸುವ ಸುಂದರ ಮರ. ಆಂಗ್ಲ ಭಾಷೆಯಲ್ಲಿ ಟ್ರಂಪೆಟ್ ಟ್ರೀ ಎಂದೂ ಕರೆಯುತ್ತಾರೆ. ಉದ್ಯಾನನಗರಿ ಎಂದು ಕರೆಸಿಕೊಳ್ಳುವ 'ಸಿಲಿಕಾನ್ ಸಿಟಿ' ಬೆಂಗಳೂರಿನಲ್ಲಿ ರಸ್ತೆ ಬದಿಗಳಲ್ಲಿ, ಉದ್ಯಾನವನಗಳಲ್ಲಿ, ದೊಡ್ಡ ದೊಡ್ಡ ಕಂಪೆನಿಗಳ ಕಟ್ಟಡಗಳ ಮುಂದೆ ಈ ತಬೂಬಿಯಾ ಮರಗಳದ್ದೇ ಕಾರುಬಾರು.

ಬಿಗ್ನೋನೇಸಿಯೆ ಕುಟುಂಬಕ್ಕೆ ಸೇರಿರುವ ಈ ಸಸ್ಯ ಮೆಕ್ಸಿಕೋ ಮೂಲದಿಂದ ಬಂದಿದೆ. ದಕ್ಷಿಣ ಅಮೆರಿಕಾ ಮತ್ತು ಏಷ್ಯಾ ಖಂಡಗಳಲ್ಲಿ ಯಥೇಚ್ಛವಾಗಿ ಹಬ್ಬಿದೆ. ಒಮ್ಮೆ ನೆಟ್ಟರೆ ಹೆಚ್ಚೇನು ಉಪಚಾರ ಬಯಸದ ಈ ಸಸ್ಯ ಹೆಚ್ಚಾಗಿ ವಸಂತ ಮಾಸದಲ್ಲಿ ಹೂ ಬಿಡುತ್ತದೆ. ಸಾಮಾನ್ಯವಾಗಿ ಇದನ್ನು ಪೊದರು ಅಥವಾ ಮರದ ರೂಪದಲ್ಲಿ ಕಾಣಬಹುದು. ಸುಮಾರು 9–12 ಮೀಟರ್ ಎತ್ತರ ಬೆಳೆಯುತ್ತದೆ. ಎಲೆಗಳೂ ಅಷ್ಟೇ ಸರಳವಾದ ರಚನೆಯನ್ನು ಹೊಂದಿರುತ್ತವೆ. ಹೂ ಬಿಟ್ಟಾಗ ಎಷ್ಟು ಸೊಗಸಾಗಿ ಕಾಣುತ್ತದೆಂದರೆ ನೋಡುಗರ ಕಣ್ಣಿಗಂತು ಹಬ್ಬವೇ!

ಇನ್ನೊಂದು ವಿಶೇಷವೆಂದರೆ, ಈ ಮರ ಹೂ ಬಿಡುವ ಸಮಯದಲ್ಲಿ ಎಲೆಗಳೇ ಇರುವುದಿಲ್ಲ. ಮರದ ತುಂಬಾ ಆಕರ್ಷಕ ಹೂಗಳೇ ಗೋಚರವಾಗುತ್ತವೆ. ಈ ಹೂವಿನ ಮಕರಂದಕ್ಕೆ ದುಂಬಿಗಳು ಮತ್ತು ಹಮ್ಮಿಂಗ್ ಬರ್ಡ್ ಶೀಘ್ರವಾಗಿ ಆಕರ್ಷಿತವಾಗುತ್ತವೆ.

ಬೀಜಗಳು ಬಲಿತಾಗ ತನ್ನಷ್ಟಕ್ಕೇ ಸಿಡಿದು ಗಾಳಿಯ ಮೂಲಕ ಪ್ರಸಾರವಾಗುವ ಗುಣವನ್ನು ಹೊಂದಿದ್ದು, ನಾವು ಸುಲಭವಾಗಿ ಬೀಜಗಳ ಮೂಲಕ ಮತ್ತು ಗೂಟಿ ಪದ್ಧತಿಯ ಮೂಲಕ ಸಸ್ಯಾಭಿವೃದ್ಧಿ ಮಾಡಬಹುದು. ಬಣ್ಣ ಬಣ್ಣದ ನಯನ ಮನೋಹರವಾದ ಹಳದಿ, ತಿಳಿಗುಲಾಬಿ, ಗುಲಾಬಿ ಮತ್ತು ಬಿಳಿ ಬಣ್ಣದ ಹೂಗಳನ್ನು ಇದೇ ಜಾತಿಯ ತಬೂಬಿಯಾ ಅರ್ಜೆನ್ಷಿಯಾ, ತಬೂಬಿಯಾ ಕ್ರೈಸಾಂತ, ತಬೂಬಿಯಾ ಅವಲಾನಿಡೆ, ತಬೂಬಿಯಾ ರೋಸಿಯಾ, ತಬೂಬಿಯಾ ಹೆಟೆರೋಫಿಲ್ಲಾ ಇತ್ಯಾದಿಗಳಲ್ಲಿ ಕಾಣಬಹುದು.

ಉದ್ಯಾನವನದ ಸೊಗಸನ್ನು ಹೆಚ್ಚಿಸಲು, ರಸ್ತೆಯ ಇಕ್ಕೆಲಗಳಲ್ಲಿ ನೆಡಲು ಇವು ಸೂಕ್ತವಾಗಿವೆ. ಜತೆಗೆ ಇದಕ್ಕೆ ಔಷಧೀಯ ಗುಣಗಳೂ ಇವೆ. ತಬೂಬಿಯಾ ರೋಸಿಯಾ ತೊಗಟೆಗೆ ಅನೀಮಿಯಾ, ಜ್ವರವನ್ನು ನಿವಾರಿಸುವ ಶಕ್ತಿಯಿದೆ. ತಬೂಬಿಯಾ ಇಂಪೆಟಿಜಿನೋಸಾಕ್ಕೆ ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾ ವಿರುದ್ಧ ಸೆಣಸಾಡುವ ಶಕ್ತಿಯಿದೆ.

